# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-1/ಡಿ.ಇ/101/2018//ಎಆರ್‌ಇ-10.

ಡಾ:ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 28/02/2022.

## ವಿಚಾರಣಾ ವರದಿ

**ಉಪಸ್ಥಿತರು:** ಜಿ. ನಂಜುಂಡಯ್ಯ, ಅಪರ ನಿಬಂಧಕರು ವಿಚಾರಣೆಗಳು-10, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** **ಆಪಾದಿತ ಸರ್ಕಾರಿ ನೌಕರ-1 ಶ್ರೀ ಚಂದ್ರಶೇಖರ್,** ಸಹಾಯಕ ಅಭಿಯಂತರರು, ಬಾಣಸವಾಡಿ, ವಾರ್ಡ್ ನಂ. 27 ಮತ್ತು **ಆಪಾದಿತ ಸರ್ಕಾರಿ ನೌಕರ-2 ಶ್ರೀಮತಿ ಗೀತಾ.** ಸಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿ ಸೇವಾನಗರ ಉಪ ವಿಭಾಗ, ಕಮ್ಮನಹಳ್ಳಿ ಮುಖ್ಯ ರಸ್ತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರುಗಳ ವಿರುದ್ಧದ ಇಲಾಖಾ ವಿಚಾರಣೆಯ ಕುರಿತು.

**ಉಲ್ಲೇಖ:** **1.ಕಂಪ್ಲೆಂಟ್/ಉಪಲೋಕ್/ಬಿಸಿಡಿ-2059/2015/ಅನಿವಿ-5 ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 18/11/2017.**
2. ಸರ್ಕಾರದ ಆದೇಶ ಸಂಖ್ಯೆ: ನಅಇ 630 ಎಂಎನ್‌ಯು 2017 ಬೆಂಗಳೂರು, ದಿನಾಂಕ: 05/02/2018.
3. ನಾಮನಿರ್ದೇಶನ ಸಂಖ್ಯೆ:ಉಪಲೋಕ್-1/ಡಿಇ-101/2018, ಬೆಂಗಳೂರು ದಿನಾಂಕ: 26.02.2018.

* * * *

1) ಸದರಿ ವಿಚಾರಣೆಗೆ ಸಂಬಂಧಿಸಿದಂತೆ, ದೂರುದಾರರಾದ ಶ್ರೀ. ಮಂಜೇಶ್.ಪಿ, ನಂ. 1250/1, ಜ್ಯೋತಿನಗರ, ಕಾಚರಕನಹಳ್ಳಿ ವಿಲೇಜ್, ಹೆಣ್ಣೂರು ಮುಖ್ಯ ರಸ್ತೆ, ಸೆಂಟ್ ಥಾಮಸ್ ಟೌನ್ ಪೋಸ್ಟ್, ಬೆಂಗಳೂರು, ರವರು (1) ಶ್ರೀ ಚಂದ್ರಶೇಖರ್, ಸಹಾಯಕ ಅಭಿಯಂತರರು, ಬಾಣಸವಾಡಿ, ವಾರ್ಡ್ ನಂ. 27, ಬಿಬಿಎಂಪಿ, ಬೆಂಗಳೂರು (2) ಶ್ರೀಮತಿ ಗೀತಾ ಸಿ, ಸಹಾಯಕ

ಕಾರ್ಯಪಾಲಕ ಅಭಿಯಂತರರು, ಮಾರುತಿಸೇವಾ ನಗರ ಉಪ ವಿಭಾಗ, ಕಮ್ಮನಹಳ್ಳಿ ಮುಖ್ಯ ರಸ್ತೆ, ಬಿಬಿಎಂಪಿ, ಬೆಂಗಳೂರು ಮತ್ತು ಶ್ರೀ ಸದಾನಂದ, ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ, ಪಿಯುಬಿ ಬಿಲ್ಡಿಂಗ್, 7ನೇ ಮಹಡಿ, ಎಂ.ಜಿ.ರಸ್ತೆ, ಬಿಬಿಎಂಪಿ, ಬೆಂಗಳೂರು ರವರುಗಳ ವಿರುದ್ಧ ಕಟ್ಟಡಗಳ ನಿರ್ಮಾಣವು ನಕ್ಷೆ ಮಂಜೂರಾತಿಯನ್ನು ಉಲ್ಲಂಘಿಸಿರುವ ಬಗ್ಗೆ ದೂರು ಸಲ್ಲಿಸಿದ್ದು, ಸದರಿ ದೂರಿನ ಮೇರೆಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ಕಲಂ 9 ರಡಿಯಲ್ಲಿ ವಿಚಾರಣೆಗೆ ತೆಗೆದುಕೊಂಡು ತನಿಖೆ ಕೈಗೊಂಡಿರುತ್ತಾರೆ.

2) ಸದರಿ ದೂರಿಗೆ ಸಂಬಂಧಿಸಿದಂತೆ ತನಿಖಾಧಿಕಾರಿ ಶ್ರೀ ಆನಂದ್, ಸಹಾಯಕ ಕಾರ್ಯಪಾಲಕ ಅಭಿಯಂತರರು ದಿನಾಂಕ 20.01.2016 ರ ವರದಿ ಮತ್ತು ದಾಖಲೆಗಳನ್ನು ಸಲ್ಲಿಸಿದ್ದು, ಸದರಿ ವರದಿಯಲ್ಲಿ ಪ್ರಸ್ತುತ ಇರುವ ಸಹಾಯಕ ಅಭಿಯಂತರರು 27.11.2015 ರಿಂದ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ ಮತ್ತು ಸದರಿಯವರು ದಿನಾಂಕ 27.11.2015 ರಿಂದ ಪ್ರಭಾರ ಸಹಾಯಕ ಕಾರ್ಯಪಾಲಕ ಅಭಿಯಂತರರಾಗಿ ಕಾರ್ಯನಿರ್ವಹಿಸುತ್ತಿರುತ್ತಾರೆ ಮತ್ತು ಸ್ವತ್ತಿನ ಸಂಖ್ಯೆ (1) 802, ವಾರ್ಡ್ ನಂ. 27, ಬಾಣಸವಾಡಿ, 3ನೇ 'ಎ' ಕ್ರಾಸ್, 8ನೇ ಮೈನ್, 5ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು ಇವರು ನಕ್ಷೆ ಮಂಜೂರಾತಿಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತ್ತಿದ್ದು, ದಿನಾಂಕ 09/07/2015 ರಂದು ನಂ. 802 ಸ್ವತ್ತಿನ ಮಾಲೀಕರಿಗೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ನೀಡಲಾಗಿದೆ ಮತ್ತು ದಿನಾಂಕ 20.07.2015 ರಂದು ದೃಢೀಕರಣ ಪತ್ರವನ್ನು ನೀಡಲಾಗಿರುತ್ತದೆ ಹಾಗೂ ಸ್ವತ್ತಿನ ಸಂಖ್ಯೆ (2) 837, 3ನೇ ಕ್ರಾಸ್, 1ನೇ ಹಂತ, ಹೆಚ್.ಆರ್.ಬಿ.ಆರ್. ಲೇಔಟ್, ಬಾಣಸವಾಡಿ, ಬೆಂಗಳೂರು ಇವರು ನಕ್ಷೆ ಮಂಜೂರಾತಿಯನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸುತಿದ್ದು ದಿನಾಂಕ 15/07/2014 ರಂದು ಪ್ರಾರಂಔಭಿಕ ಪ್ರಮಾಣ ಪತ್ರಮತ್ತು ದಿನಾಂಕ 24/07/2014 ರಂದು ದೃಢೀಕರಣ ಪತ್ರವನ್ನು ನೀಡಿರುವುದಾಗಿ ತಿಳಿಸಿರುತ್ತಾರೆ. 1 ರಿಂದ 3ನೇ ಎದುರುದಾರರು ತಮ್ಮ ಆಕ್ಷೇಪಣೆಯನ್ನು ಸಲ್ಲಿಸಿದ್ದು, ದಾಖಲೆಗಳ ಪರಿಶೀಲನೆಯ ನಂತರ ಆ.ಸ.ನೌ.–1 ಮತ್ತು 2 ರವರುಗಳು ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ, 1966 ಕಲಂ 3(1) ರಡಿಯಲ್ಲಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಕಾರಣ, ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3) ಅಡಿಯಲ್ಲಿ, ಉಲ್ಲೇಖ(1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿ ಅನ್ವಯ ಕರ್ನಾಟಕ

ಸರ್ಕಾರವು ಆದೇಶ ದಿನಾಂಕ 05/02/2018 ರಂದು ಮಾನ್ಯ ಉಪಲೋಕಾಯುಕ್ತ-1 ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ, ನಾಮ ನಿರ್ದೇಶನವನ್ನು ನೀಡಿದ್ದು, ಅದರಂತೆ ಮಾನ್ಯ ಉಪಲೋಕಾಯುಕ್ತ-1 ರವರು ದಿನಾಂಕ 26/02/2018 ರಂದು ಅಪರ ನಿಬಂಧಕರು, ವಿಚಾರಣೆಗಳ-10 ರವರಿಗೆ ವಿಚಾರಣೆ ಮಾಡಿ ವರದಿಯನ್ನು ಸಲ್ಲಿಸುವಂತೆ ನಾಮನಿರ್ದೇಶನ ಮಾಡಿರುತ್ತಾರೆ.

3) ನಾಮ ನಿರ್ದೇಶನದ ಆದೇಶದಂತೆ, ಆ.ಸ.ನೌ-1 ಮತ್ತು 2 ರವರುಗಳ ವಿರುದ್ಧ ದೋಷಾರೋಪಣೆ (Article of charges) ಅನ್ನು ಅಪರ ನಿಬಂಧಕರು, ವಿಚಾರಣೆಗಳು-10 ರವರು ರಚಿಸಿದ್ದು, ಸದರಿ ದೋಷಾರೋಪಣೆ ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯ ಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು **ಆ.ಸ.ನೌ-1 ಮತ್ತು 2** ರವರುಗಳಿಗೆ ದಿನಾಂಕ 05/04/2018 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ANNEXURE NO. I

## CHARGE

That, you (1) **Sri. Chandrashekar**, **Assistant Engineer,** Banasawadi Ward No. 27 and (2) **Smt. Geetha C, Assistant Executive Engineer,** Maruthisevanagara Sub-Division, Kammanahgalli Main Road, BBMP, Bengaluru have committed the following misconduct;

You DGOs have issued a Provisional order to the owner of property No. 802, HRBR Layout, 1st stage, Banasawadi on 9.7.2015. Provisional order to the owner of property No. 837, HRBR Layout, 1st stage, Banasawadi is

issued on 15.07. 2014 and confirmation order is issued on 24.07.2014. Though Respondent Nos. 1 and 2 have worked till November 2015 in Maruthi Sevanagar Sub Division, they have not taken any action for a period of 4 months after issuing provisional order and confirmation order in July 2015. This inaction on the part of Respondent Nos. 1 and 2 amounts to dereliction of duty and misconduct.

Thus, you DGOs and others being Government/Public servants have failed to maintain absolute integrity besides devotion to duty and acted in a manner unbecoming of Government servants and thus committed misconduct as enumerated U/R 3(1) of Karnataka Civil Service (Conduct) Rules1966.

**ANNEXURE NO. II**

**STATEMENT OFIMPUTATIONS OF MISCONDUCT**

3. On the basis of complaintfiled by Sri. Manjesh P. No. 1250/1, Jyothinagar, Kacharakanahalli village, Hennuru Main Road, St. Thomas Town post, Bengaluru (hereinafter referred to as 'complainant' for short) against (1) **Chandrashekar,**

Assistant Engineer, Banasawadi, Ward No. 27, BBMP, Bengaluru (2) Smt. Geetha C, Assistant Executive Engineer, Maruthi Sevanagar, Sub Division, Kammanahalli Main road, BBMP, Bengaluru and (3) Sadananada, Executive Engineer, Sarvajnanagar, PUB Building, 7th floor, M.G. Road, BBMP, Bengaluru (hereinafter referred to as Respondent Nos. 1 to 3 respectively) alleging that the Respondents have committed misconduct, an investigation was taken up after invoking Section 9 of Karnataka Lokayukta Act, 1984.

4. According to the complainant:

Buildings in the following properties are under construction and said construction are in violation of sanctioned plan.

1. No. 304, 6th Cross, Bhuvanagiri, Banasavadi, Bengaluru-43.
2. No. 312, 6th Cross, Bhuvanagiri, Banasavadi, Bengaluru-43.
3. No. 315, 6th Cross, Bhuvanagiri, Banasavadi, Bengaluru-43.
4. No. 317, 6th Cross, Bhuvanagiri, Banasavadi, Bengaluru-43.
5. No. 319, 6th Cross, Bhuvanagiri, Banasavadi, Bengaluru-43.
6. S.V. Grande Apartment, 6th Cross, Bhuvanagiri, Banasavadi, Bengaluru-43.

7. No. 322, 6th 'A' Cross, near BWSSB Tank, Bhuvanagiri, Banasavadi, Bengaluru-43.
8. No. 306, 6th Cross, near BWSSB Tank, Bhuvanagiri, Banasavadi, Bengaluru-43.

5. Documents concerning the buildings referred in the complaint were called for from BBMP. Assistant Executive Engineer Sri. K. Anand has submitted report dated 20.01.2016 and documents. His report is that present Assistant Engineer is working from 27.11.2015 and he is working as I/c Assistant Executive Engineer from 27.11.2015 and that (1) owner of property No. 802 Ward No. 27, Banaswadi, 3rd 'A' cross, 8thMain, 5th Block, Kalyanagar, Bengaluru has constructed building in violation of sanctioned plan. Provisional order has been issued to the owner of property No. 802 on 09/07/2015 and confirmation order on 20/07/2015. (2) That property No. 837, 3rd Cross, 1st Stage, HRBR Layout, Banasawadi, Bengaluru has constructed building in violation of sanctioned plan. Provisional order has been issued to the owner of property No. 837 on 15.07.2014 and confirmation order on 24.07.2014.

6. Complainant has submitted rejoinder dated 13.06.2016 stating that no action has been taken after issuing Provisional Order and Confirmation Order in spite of complaining several times.

7. Assistant Executive Engineer, BBMP, Maruthi Sevanagar Sub. Division, has furnished information that provisional order and confirmation order were issued to the owner of property No. 802, 3rd A Cross, 8th Main, Kalyananagar and to the owner of property No. 837, 3rd Cross, 1st Stage, HRBR Layout and they are issued by

Respondent No.1 B.V. Chandrashekar, Assistant Engineer and Respondent No.2 Smt. Geetha C, Assistant Executive Engineer.

8. Respondent No.1 has submitted comments stating that he could not take action against the owners of unauthorized buildings as they had obtained stay order from the Court and he was relieved from the post of Assistant Engineer on 16.11.2015.

9. Respondent No.2 has submitted comments dated 4.7.2017 stating that she had worked as Assistant Executive Engineer, Maruthi Sevanagar Sub Division, BBMP from 11.07.2014 to 13.11.2015 and she issued orders now and then in respect of unauthorized construction when ever files were submitted to her by Assistant Engineer.

10. Respondent No.3 has submitted comments stating that he is not concerned with issuing provisional order and confirmation order.

11. Provisional order dated 09.07.2015 is issued by Respondent No.1 and Respondent No.2 to the owner of proerpty No. 802, HRBR Layout, 1st Stage, Banasawadi, Bengaluru. Provisional order dated 15.07.2014 and Confirmation order dated 24/07/2014 are issued to the owner of property No. 837 HRBR Layout, 1st stage, Banasawadi, Bengaluru by Respondent Nos. 1and 2.

12. Respondents have not produced any stay order to take action in pursuance to the provisional order and confirmation order issued

to the owners. Respondent No.1 has stated in his comments that he worked till 16.11.2015. Respondent No. 2 has stated that she worked from 11.07.2014 to 13.11.2015 in Maruthi Sevanagar Sub-Division. Provisional Order to the owner of property No. 802, HRBR Layout, 1st Stage, Banasawadi is issued on 09.07.2015. Provisional order to the owner of property No. 837, HRBR Layout, 1st stage, Banasawadi is issued on 15.07.2014 and confirmation order is issued on 24.07.2014. Though Respondent Nos. 1 and 2 have worked till November 2015 in Maruthi Sevanagar Sub Division, they have not taken any action for a period of 4 months after issuing provisional order and confirmation order in July 2015. This inaction on the part of Respondent No.1 and 2 amounts to dereliction of duty and misconduct. Therefore, comments submitted by them are not acceptable to drop the proceedings against them.

13. Respondent No.3 has explained that he is not concerned with issue of provisional order and confirmation order.

14. Since, the said facts and materials on record prima facie show that Respondent No.1 Chandrashekar, Assistant Engineer, Banasawadi, Ward No. 27, BBMP, Bengaluru and (2) Smt. Geetha C, Assistant Executive Engineer, maruthi Sevanagar, Sub-Division, Kammanahalli Main road, BBMP, Bengaluru have committed misconduct under Rule 3(1) of KCS (Conduct) Rules, 1966 recommendation is made under Section 12(3) of Karnataka lokayukta Act,f 1984 to the Competent Authority to initiate disciplinary proceedings against them and to entrust the inquiry to

the Hon'ble Upalokayukta-1 under Rule 14-A of Karnataka Civil Service (Classifications, Control and Appeal) Rules, 1957. In turn, the Competent Authority initiate disciplinary proceedings against DGOs-1 and entrusted the enquiry to this institution vide reference No.2 and Hon'ble Upalokayukta nominated Additional Registrar of Enquiries-10 to conduct enquiry and to submit report vide reference No.3. **Hence, the above said charge.**

4) ಈ ಮೇಲ್ಕಂಡ ದೋಷಾರೋಪಣೆ (ಆರ್ಟಿಕಲ್ ಆಫ್ ಚಾರ್ಜ್) ಆ.ಸ.ನೌ–1 ಮತ್ತು 2 ರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–1 ಮತ್ತು 2 ರವರುಗಳು ದಿನಾಂಕ 18/06/2018 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿದ್ದು, ಅವರುಗಳ ಪ್ರಥಮ ಮೌಖಿಕ ಹೇಳಿಕೆಯನ್ನು ನಿಯಮ–11 (9) ಕೆ.ಸಿ.ಎಸ್. ಸಿಸಿಎ ರೂಲ್ಸ್ 1957ರ ಅಡಿಯಲ್ಲಿ ದಾಖಲಿಸಿಕೊಳ್ಳಲಾಗಿರುತ್ತದೆ. ಆ.ಸ.ನೌ–1 ಮತ್ತು 2 ರವರುಗಳು ತಪ್ಪೊಪ್ಪಿಕೊಳ್ಳದೆ ಆರೋಪಗಳ ವಿಚಾರಣೆಯನ್ನು ಬಯಸಿರುತ್ತಾರೆ.

5) ಆ.ಸ.ನೌ–1 ಮತ್ತು 2 ರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6) ಆ.ಸ.ನೌ–1 ಮತ್ತು 2 ರವರುಗಳು ತಮ್ಮ ಲಿಖಿತ ರಕ್ಷಣಾ ಹೇಳಿಕೆಯನ್ನು ದಿನಾಂಕ 23/06/2018 ರಂದು ಸಲ್ಲಿಸಿ, ದೋಷಾರೋಪಣೆಯಲ್ಲಿ ಮಾಡಿರುವ ಆರೋಪಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ,

7) ಈ ವಿಚಾರಣೆಯಲ್ಲಿ, ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ಮಂಜೇಶ್.ಪಿ** ರವರನ್ನು ಪಿ.ಡಬ್ಲ್ಯೂ.1 ಎಂದು ಮತ್ತು ಶ್ರೀ **ಕೆ. ಆನಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು,** ಮಾರುತಿ ಸೇವಾ ನಗರ ಉಪವಿಭಾಗ, ಬಿಬಿಎಂಪಿ,

ಬೆಂಗಳೂರು ರವರುಗಳನ್ನು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 13** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ. ತದನಂತರ, ಆ.ಸ.ನೌ–1 ಮತ್ತು 2 ರವರುಗಳ ದ್ವಿತೀಯ ಮೌಖಿಕ ಹೇಳಿಕೆಯನ್ನು ದಿನಾಂಕ 05/01/2022 ರಂದು ಪಡೆದುಕೊಳ್ಳಲಾಗಿರುತ್ತದೆ.

8) ಆಪಾದಿತ ಸರ್ಕಾರಿ ನೌಕರ–1 ಶ್ರೀ ಚಂದ್ರಶೇಖರ್, ಸಹಾಯಕ ಅಭಿಯಂತರರು, ಬಾಣಸವಾಡಿ ವಾರ್ಡ್ ನಂ. 27 ಮತ್ತು ಆಪಾದಿತ ಸರ್ಕಾರಿ ನೌಕರ–2 ಶ್ರೀಮತಿ ಗೀತಾ.ಸಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿ ಸೇವಾನಗರ ಉಪ ವಿಭಾಗ, ಬಿಬಿಎಂಪಿ, ಬೆಂಗಳೂರು ರವರುಗಳು , ತಮ್ಮ ಪರವಾಗಿ ಯಾವುದೇ ಸಾಕ್ಷ್ಯವನ್ನಾಗಲೀ ವಿಚಾರಣೆಯನ್ನಾಗಲೀ ಮಾಡಿಕೊಂಡಿರುವುದಿಲ್ಲ ಮತ್ತು ದಾಖಲಾತಿಗಳನ್ನು ಸಹ ಗುರುತಿಸಿಕೊಂಡಿರುವುದಿಲ್ಲ. ಆದ್ದರಿಂದ ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರ 11(18) ಕೆ.ಸಿ.ಎಸ್ (ಸಿಸಿಎ) ನಿಯಮ, 1957 ರ ಪ್ರಕಾರ ಪ್ರಶ್ನಾವಳಿಯನ್ನು ಮಾಡಿ ದಿನಾಂಕ 17/01/2022 ರಂದು ಉತ್ತರ ಪಡೆದುಕೊಂಡಿದ್ದು ಸದರಿಯವರು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ.

9) ಉಭಯ ಪಕ್ಷದವರ ಪರವಾಗಿ ಮಂಡನಾಧಿಕಾರಿಗಳ ವಾದ ವಿವಾದವನ್ನು ಮತ್ತು ಆ.ಸ.ನೌ–1 ಮತ್ತು 2 ರವರುಗಳ ಪರ ಲಿಖಿತ ವಾದವನ್ನು ಪರಿಶೀಲಿಸಲಾಯಿತು.

10) ಈ ಕೆಳಕಂಡ ಅಂಶವು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತದೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌ–1 ಮತ್ತು 2 ರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತು ಪಡಿಸಿದೆಯೇ?

**ಅಂಶ–2:** ಆದೇಶವೇನು?

11) ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12) ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿದೆ.

**ಅಂಶ 1: ಸಕರಾತ್ಮಕವಾಗಿ**

**ಅಂಶ 2: ಅಂತಿಮ ಆದೇಶದಂತೆ**

**ಕಾರಣಗಳು:**

13) ಈ ವಿಚಾರಣೆಯಲ್ಲಿ, ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಮಂಡನಾಧಿಕಾರಿಗಳು ತಮ್ಮ ಪರವಾಗಿ **ದೂರುದಾರರಾದ ಶ್ರೀ ಮಂಜೇಶ್.ಪಿ** ರವರನ್ನು ಪಿ.ಡಬ್ಲ್ಯೂ.1 ಎಂದು ಮತ್ತು ಶ್ರೀ **ಕೆ. ಆನಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು,** ಮಾರುತಿ ಸೇವಾ ನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು ರವರುಗಳನ್ನು ಸಾಕ್ಷ್ಯ ನುಡಿಸಿಕೊಂಡು **ನಿ.ಪಿ.–1 ರಿಂದ 13** ರವರೆಗಿನ ದಾಖಲೆಗಳನ್ನು ಶಿಸ್ತು ಪ್ರಾಧಿಕಾರದ ಪರವಾಗಿ ಗುರುತಿಸಿಕೊಂಡಿರುತ್ತಾರೆ.

14) ದೂರುದಾರ ಪಿ.ಡಬ್ಲ್ಯೂ–1 ಶ್ರೀ **ಮಂಜೇಶ್** ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ತನಗೆ ಆಪಾದಿತ ಸರ್ಕಾರಿ ನೌಕರ–1 ಮತ್ತು 2 ಪರಿಚಯವಿರುತ್ತದೆ. ತಾನು ಸಲ್ಲಿಸಿರುವ ದೂರು ದಿನಾಂಕ 26.05.2015, ಪ್ರಪತ್ರ–1 (ದೂರು), ಪ್ರಪತ್ರ–2 (ಪ್ರಮಾಣ ಪತ್ರ) ಗಳನ್ನು ನಿ.ಪಿ–1 ರಿಂದ 3 ಎಂದು ಗುರುತಿಸಲಾಗಿರುತ್ತದೆ. ಬೆಂಗಳೂರು ನಗರದ, ಬಾಣಸವಾಡಿ ಬಡಾವಣೆ, ಬಿಬಿಎಂಪಿ ವಾರ್ಡ್ ನಂ.27ರ ವ್ಯಾಪ್ತಿಯಲ್ಲಿ ಬರುವ ಸ್ವತ್ತಿನ ನಂ.802 ಮತ್ತು 837 ರಲ್ಲಿ ಮಾಲೀಕರು ಮಂಜೂರಾತಿ ನಕ್ಷೆಗೆ ವಿರುದ್ಧವಾಗಿ ಕಟ್ಟಡ ಕಟ್ಟುತ್ತಿದ್ದರು. ದೂರಿನಲ್ಲಿ ಇನ್ನು ಉಳಿದ ಆಸ್ತಿಯ ಬಗ್ಗೆ ಹೇಳಿರುತ್ತೇನೆ. ಸದರಿ 2 ಆಸ್ಥಿಯನ್ನು ಡಿಜಿಪಿ ಯಾವ ದಿನಾಂಕದಂದು ತಾತ್ಕಲಿಕ

ಆದೇಶವನ್ನು ಮತ್ತು ಯಾವ ದಿನಾಂಕದಂದು ಸ್ಥಿರೀಕರಣ ಆದೇಶವನ್ನು ಮಾಡಿದ್ದರು ಎಂದು ಗೊತ್ತಿಲ್ಲ. ಡಿಜಿಓರವರು ಸಹಾಯಕ ಇಂಜಿನಿಯರ್ ಮತ್ತು ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ರಾಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ನಕ್ಷೆಗೆ ವಿರುದ್ಧವಾಗಿ ಕಟ್ಟಡ ಕಟ್ಟುತ್ತಿದ್ದ ಬಗ್ಗೆ ಡಿಜಿಓರವರ ಗಮನಕ್ಕೆ ತಂದಿದ್ದೆ. ಯಾವುದೇ ಕ್ರಮ ಜರುಗಿಸದ ಕಾರಣ ಈ ಸಂಸ್ಥೆಗೆ ದೂರು ಸಲ್ಲಿಸಿದೆ.

15) ಪಿಡಬ್ಲ್ಯೂ–1 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಬಿಬಿಎಂಪಿ ಆಯುಕ್ತರು 2010ರಂದು ಹೊರಡಿಸಿದ ಆದೇಶದ ಪ್ರಕಾರ ನಕ್ಷೆ ಮಂಜೂರಾತಿ ಆದ ನಂತರ ಕಟ್ಟಡವನ್ನು ಸಹಾಯಕ ಅಭಿಯಂತರರು ಕಟ್ಟಡ ಪರಿಶೀಲನೆ ಮಾಡಿ ವರದಿ ಮಾಡಬೇಕು. ಕಟ್ಟಡವನ್ನು ನಿಂಟ್ ಲೆವೆಲ್‌ನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಬೇಕು, ಕಟ್ಟಡದ ಮೇಲ್ಛಾವಣಿ ಕಾಮಗಾರಿಯನ್ನು ಮಂಜೂರಾದ ನಕ್ಷೆಯಂತೆ ಕಟ್ಟಡವನ್ನು ಕಾರ್ಯಪಾಲಕ ಅಭಿಯಂತರರವರು ಪರಿಶೀಲಿಸಬೇಕು. ಸದರಿ 3 ಹಂತಗಳಲ್ಲಿ ಸಂಬಂಧ ಪಟ್ಟ ಅಧಿಕಾರಿಗಳು ಪರಿಶೀಲನೆ ಮಾಡಿ ವರದಿ ಮಾಡಿಬೇಕು. ಅನಧಿಕೃತ ಕಟ್ಟಡ ನಿರ್ಮಾಣ ಆಗುತ್ತಿರಲಿಲ್ಲ. ಸದರಿ ಸರ್ಕಾರಿ ಆದೇಶದ ನಕಲು ಪ್ರತಿಯನ್ನು ಹಾಜರು ಪಡಿಸಿದ್ದು, ಅದನ್ನು ***ನಿಶಾನೆ ಪಿ–4*** ಎಂದು, ಸದರಿ ಆದೇಶದಂತೆ ಡಿಜಿಓರವರುಗಳು ಕ್ರಮ ಜರುಗಿಸಿರುವುದಿಲ್ಲ. ದೂರುದಾರರು ಪ್ರತ್ಯುತ್ತರದೊಂದಿಗೆ ದಾಖಲೆಗಳ ನಕಲು ಪ್ರತಿಯನ್ನು ಪುಟ ಸಂ.10–33ರವರೆಗೆ ಹಾಜರು ಮಾಡಿದ್ದು ಒಟ್ಟಾಗಿ ***ನಿಶಾನೆ ಪಿ–5*** ಎಂದು ಗುರುತಿಸಲಾಯಿತು. ಪುಟ. ಸಂ.13ರಲ್ಲಿ ಚಂದ್ರಶೇಖರ್ ಸಸ್ಪೆಂಡ್ ಮಾಡಿದ ಆದೇಶ ಇರುತ್ತದೆ. ಆದುದರಿಂದ ಕಾನೂನು ಕ್ರಮ ಜರುಗಿಸಬೇಕಾಗಿ ಕೋರಿರುತ್ತಾರೆ.

16) ಪಿಡಬ್ಲ್ಯೂ–2 **ಶ್ರೀ ಕೆ. ಆನಂದ,** ಸಹಾಯಕ ಕಾರ್ಯಾಪಾಲಕ ಅಭಿಯಂತರರು, ಮಾರುತಿ ಸೇವಾನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು ರವರ ಮುಖ್ಯ ವಿಚಾರಣೆಯಲ್ಲಿ, ದಿನಾಂಕ: 25–01–2016 ರಿಂದ ದಿನಾಂಕ: 25–01–2017ವರಗೆ ತಾನು ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿ ಸೇವಾ ನಗರ ಉಪವಿಭಾಗ, ಬಿಬಿಎಂಪಿ,

ಬೆಂಗಳೂರು ಇಲ್ಲಿ ಕರ್ತವ್ಯ ನಿರ್ವಹಿಸಿದ್ದು, ದಿನಾಂಕ: 18-01-2016ರಲ್ಲಿ ಶ್ರೀ ಅನಿಲ್ ಕುಮಾರ್ ಎ.ಇ.ಇ ರವರು ರಜೆಯ ಮೇಲಿದ್ದಾಗ, ನಾನು ದಿನಾಂಕ: 18-01-2016 ರಿಂದ 24-01-2016ರವರೆಗೆ ಸದರಿಯವರ ರಜಾ ಅವಧಿಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ, ಮಾರುತಿ ಸೇವಾ ನಗರ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಹೆಚ್.ಪಿ.ಆರ್. ಲೇಔಟ್ ಉಪವಿಭಾಗದಲ್ಲಿ ನಾನು ಮೂಲ ಪ್ರಭಾರದಲ್ಲಿದ್ದೆನು. ದಿನಾಂಕ: 08-12-2015 ರಂದು ವಾರ್ಡ್ ನಂ.27ರ ಸಹಾಯಕ ಅಭಿಯಂತರರು, ಕರ್ನಾಟಕ ಲೋಕಾಯುಕ್ತದಿಂದ ಒಂದು ದೂರಿನ ಬಗ್ಗೆ ತನಿಖೆ ಮಾಡಿ ವರದಿ ನೀಡುವಂತೆ ಸೂಚಿಸಿದ್ದರು.

17) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಅದರಂತೆ ತಾನು ವಾರ್ಡ್ ನಂ.27 ರ ಬಾಣಸವಾಡಿ ಆಸ್ತಿ ಸಂ: 802 3ನೇ ಎ ಅಡ್ಡರಸ್ತೆ, 8ನೇ ಮುಖ್ಯ ರಸ್ತೆ, 5ನೇ ಬ್ಲಾಕ್, ಕಲ್ಯಾಣ ನಗರ್, ಬೆಂಗಳೂರು ಇಲ್ಲಿ ಭೇಟಿ ಕೊಟ್ಟು, ಸ್ವತ್ತಿನ ಮಾಲೀಕರು ಶ್ರೀಮತಿ ನಿರ್ಮಲಾ ಗೋಯೆಲ್ ಮತ್ತು ಇನ್ನಿಬ್ಬರಾಗಿದ್ದು, ಅವರು ಸಹಾಯಕ ನಿರ್ದೇಶಕರು, ನಗರ ಯೋಜನೆ, ಪೂರ್ವ, ಬಿಬಿಎಂಪಿ, ಬೆಂಗಳೂರುರವರು ಸಿಲ್ಟ್, ನೆಲಮಹಡಿ, ಮೊದಲನೇ ಮಹಡಿ ಮತ್ತು 2ನೇ ಮಹಡಿ ವಸತಿ ಮತ್ತು ವಾಣಿಜ್ಯ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿಯನ್ನು ಪಡೆದಿರುತ್ತಾರೆ. ವಾರ್ಡ್ ಪರಿವೀಕ್ಷಣೆ ಸಮಯದಲ್ಲಿ ಸದರಿ ಸ್ವತ್ತಿನ ಮಾಲೀಕರು ಅನಧೀಕೃತವಾಗಿ 3, 4 ಮತ್ತು 5ನೇ ಮಹಡಿಗಳನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ. ಸದರಿ ಅನಧಿಕೃತವಾಗಿ ಕಟ್ಟಡ ಕಟ್ಟಿದ್ದಕ್ಕೆ ಹಿಂದಿನ ಎ.ಇ.ಇ ರವರು ಕರ್ನಾಟಕ ಮುನಿಸಿಪಲ್ ಕಾಯ್ದೆ 76 ರ ಕಲಂ.321(1) 321(2) ತಾತ್ಕಾಲಿಕ ಆದೇಶವನ್ನು ದಿನಾಂಕ: 09-07-2015ರಂದು ಜಾರಿ ಮಾಡಿರುತ್ತಾರೆ. ಸದರಿ ಮಾಲೀಕರು ಯಾವುದೇ ಪ್ರತಿಕ್ರಿಯೆ ನೀಡದ ಕಾರಣ, ಹಿಂದಿನ ಎ.ಇ.ಇರವರು ಸ್ಥಿರೀಕರಣ ಆದೇಶ ಮಾಡಿರುತ್ತಾರೆ.

18) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, 2) ಸ್ವತ್ತಿನ ಸಂಖ್ಯೆ: 837, 3ನೇ ಅಡ್ಡರಸ್ತೆ, 1ನೇ ಹಂತ, ಹೆಚ್.ಆರ್.ಬಿ.ಆರ್. ಲೇಔಟ್ ಬಾಣಸವಾಡಿ, ಬೆಂಗಳೂರು ಇಲ್ಲಿಗೆ ಭೇಟಿ ಕೊಟ್ಟು, ಸ್ವತ್ತಿನ ಮಾಲೀಕರಾದ ಶ್ರೀಮತಿ ಎಸ್.ಎ. ನಾಗಾದೇವಿ, ಎಸ್.ಎ.ರಾಜು, ಎಸ್.ಎ. ಕಾಂತರಾಜ ಮತ್ತು ಎ.ಆರ್. ನಿರ್ಮಲರವರು ಸಹಾಯಕ ನಿರ್ದೇಶಕರು, ನಗರ

ಯೋಜನೆ, ಪೂರ್ವ, ಬಿಬಿಎಂಪಿ, ಬೆಂಗಳೂರುರವರು ಬೇಸ್‌ಮೆಂಟ್, ನೆಲ, 1 ಮತ್ತು 2ನೇ ಮಹಡಿ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿಯನ್ನು ಪಡೆದಿರುತ್ತಾರೆ. ನನ್ನ ಭೇಟಿಯ ಸಮಯದಲ್ಲಿ ಪರಿಶೀಲಿಸಲಾಗಿ ಸ್ಟಿಲ್ಟ್ ನೆಲ, ಮೊದಲನೇ ಮತ್ತು ಎರಡನೇ ಮಹಡಿ ಮತ್ತು ವಸತಿ ಮತ್ತು ವಾಣಿಜ್ಯ ಕಟ್ಟಡ ನಿರ್ಮಿಸಿರುವುದು ಕಂಡುಬಂದಿದ್ದು, ಅದು ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿರುವುದು ಕಂಡುಬಂದಿರುತ್ತದೆ. ಸದರಿ ಮಾಲೀಕರಿಗೆ ಕೆ.ಎಂ.ಸಿ ಕಾಯ್ದೆ 1976ರ ಕಲಂ.321(1) ಮತ್ತು 321(2)ರಂತೆ ತಾತ್ಕಾಲಿಕ ಆದೇಶವನ್ನು ಜಾರಿ ಮಾಡಿದ್ದು ಹಾಗೂ ತಾತ್ಕಾಲಿಕ ಆದೇಶಕ್ಕೆ ಯಾವುದೇ ಪ್ರತಿಕ್ರಿಯೆ ನೀಡದ ಕಾರಣ ದಿನಾಂಕ: 24-07-2014ರಂದು ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿರುತ್ತಾರೆ.

19) ಪಿಡಬ್ಲ್ಯೂ-2 ರವರ ಮುಂದುವರೆದ ಮುಖ್ಯ ವಿಚಾರಣೆಯಲ್ಲಿ, ಸ್ವತ್ತಿನ ಸಂಖ್ಯೆ: 839ರ 3ನೇ ಅಡ್ಡರಸ್ತೆ, 9ನೇ ಮುಖ್ಯ ರಸ್ತೆ, ಗಣೇಶ ದೇವಸ್ಥಾನದ ಎದುರು, ಹೆಚ್.ಆರ್.ಬಿ.ಆರ್. ಲೇಔಟ್, ಬಾಣಸವಾಡಿ, ಬೆಂಗಳೂರು, ಸದರಿ ನಮೂದಿಸಿರುವ ರಸ್ತೆಯಲ್ಲಿ, ನಿವೇಶನ ಸಂಖ್ಯೆ ಕಂಡುಬಂದಿರುವುದಿಲ್ಲ. ಇದನ್ನು ನಮ್ಮ ಸಹಾಯಕ ಅಭಿಯಂತರರು ಸಹ ಪರಿಶೀಲಿಸಿ ತಿಳಿಸಿರುತ್ತಾರೆ ಮತ್ತು ಕಂದಾಯ ಇಲಾಖೆಯಲ್ಲಿ ಈ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆ ಇಲ್ಲ ಎಂದು ಶ್ರೀಕಾಂತ್, ಎ.ಇ. ಸಹಾಯಕ ಅಭಿಯಂತರರು ತಿಳಿಸಿರುತ್ತಾರೆ. ಆ ಬಗ್ಗೆ ನನ್ನ ವರದಿಯನ್ನು ನೀಡಿದ್ದು, ಅದನ್ನು ಈ ನೋಡುತ್ತಿದ್ದು, ಅದನ್ನು ಈಗ **ನಿ.ಪಿ-6(ಒಟ್ಟು 2 ಪುಟಗಳು)** ಎಂದು ಗುರುತಿಸಲಾಯಿತು ಹಾಗೂ ಅದರ ಮೇಲಿನ ಸಹಿಯನ್ನು **ನಿ.ಪಿ-6ಎ** ಎಂದು ಗುರುತಿಸಲಾಯಿತು. ನಿ.ಪಿ-6ರ ತನಿಖಾ ವರದಿಯೊಂದಿಗೆ ಕೆ.ಎಂ.ಸಿ ಕಾಯ್ದೆ 321(1)(2) ಮತ್ತು ಸ್ಥಿರೀಕರಣ ಆದೇಶವನ್ನು ಹಾಜರುಪಡಿಸಿದ್ದು, ಅವುಗಳನ್ನು ಈಗ ಕ್ರಮವಾಗಿ **ನಿ.ಪಿ-7 ರಿಂದ ನಿ.ಪಿ-13** ಎಂದು ಗುರುತಿಸಲಾಯಿತು. ಸದರಿ ನನ್ನ ಮೇಲ್ಕಂಡ ವರದಿ ನಿ.ಪಿ-6ಅನ್ನು ದಾಖಲಾತಿಗಳೊಂದಿಗೆ ಉಪ ನಿಬಂಧಕರು ವಿಚಾರಣೆಗಳು-2, ಕರ್ನಾಟಕ ಲೋಕಾಯುಕ್ತ ಸಂಸ್ಥೆಗೆ ದಿನಾಂಕ: 20-01-2016ರಂದು ಸಲ್ಲಿಸಿರುತ್ತೇನೆಂದು ಸಾಕ್ಷ್ಯ ನುಡಿದಿರುತ್ತಾರೆ.

20) ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳು ದಿನಾಂಕ 15/02/2022 ರ ತಮ್ಮ ಲಿಖಿತ ವಾದದಲ್ಲಿ ದೂರುದಾರರು ತಮ್ಮ ದೂರಿನೊಂದಿಗೆ ದೂರನ್ನು ಸಮರ್ಥಿಸುವ

ಯಾವುದೇ ಪ್ರಗತಿಯ ಬಗ್ಗೆ ತಿಳಿದುಕೊಳ್ಳದೆ ಸುಳ್ಳು ದೂರು ಸಲ್ಲಿಸಿರುವುದು ಸುಮ್ಮನೆ ಒಟ್ಟಾಗಿ 13 ಸ್ವತ್ತಿನ ಸಂಖ್ಯೆಗಳನ್ನು ನಮೂದಿಸಿ ನಿಯಮ ಉಲ್ಲಂಘಿಸಿ ಕಟ್ಟಡ ನಿರ್ಮಾಣವಾಗುತ್ತಿರುವುದಾಗಿ ನಮೂದಿಸಿ, ಆದರೆ ಆರೋಪದಲ್ಲಿ 2 ಸ್ವತ್ತಿಗೆ ಮಾತ್ರ ಆಪಾದನೆ ಮಾಡಲಾಗಿದೆ ಉಳಿದ ಸ್ವತ್ತಿಗೆ ದೂರುದಾರರು ಸುಳ್ಳು ದೂರು ನೀಡಿರುತ್ತಾರೆ. ನಿ.ಪಿ–6 ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿ ಸೇವಾ ನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು ರವರು ತಮ್ಮ ವರದಿ ವರದಿಯಲ್ಲಿ ಆ.ಸ.ನೌ–1 ಮತ್ತು 2 ರವರು ಕಾನೂನು ಉಲ್ಲಂಘಿಸಿ ಕರ್ತವ್ಯಚ್ಯುತಿ ಎಸಗಿರುತ್ತಾರೆಂದು ವರದಿಯಲ್ಲಿ ನಮೂದಿಸಿರುವುದಿಲ್ಲವೆಂದು ಸಾಕ್ಷ್ಯ ನುಡಿದಿರುತ್ತಾರೆ. ತಾವುಗಳು ನಿಯಮಾನುಸಾರವಾಗಿ ಕ್ರಮಕೈಗೊಂಡಿರುತ್ತೇವೆಂದು ಕರ್ತವ್ಯಲೋಪವೆಸಗಿರುವುದಿಲ್ಲವೆಂದು ತಮ್ಮಗಳ ಲಿಖಿತ ವಾದದಲ್ಲಿ ತಿಳಿಸಿರುತ್ತಾರೆ.

21) ಪಿ.ಡಬ್ಲ್ಯೂ–1 ಮತ್ತು 2 ರವರುಗಳ ಸಾಕ್ಷ್ಯ ನಿ.ಪಿ–1 ರಿಂದ ನಿ.ಪಿ–13 ಹಾಗೂ ಕಡತದಲ್ಲಿರುವ ದಾಖಲಾತಿಗಳನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ, ದೋಷಾರೋಪಣೆಯಲ್ಲಿ ಆಪಾದಿಸಿರುವಂತೆ (1) ವಾರ್ಡ್ ಸಂಖ್ಯೆ 27, ಬಾಣಸವಾಡಿಯ ಆಸ್ತಿ ಸ್ವತ್ತಿನ ಸಂಖ್ಯೆ 802, 3ನೇ ಎ ಅಡ್ಡ ರಸ್ತೆ, 8ನೇ ಮುಖ್ಯ ರಸ್ತೆ, 5ನೇ ಬ್ಲಾಕ್, ಕಲ್ಯಾಣ ನಗರ, ಬೆಂಗಳೂರು (2) ಸ್ವತ್ತಿನ ಸಂಖ್ಯೆ 837, 3ನೇ ಅಡ್ಡ ರಸ್ತೆ, 1ನೇ ಹಂತ, ಹೆಚ್.ಆರ್.ಬಿ.ಆರ್. ಲೇಔಟ್, ಬಾಣಸವಾಡಿ, ಸದರಿ ಸ್ವತ್ತುಗಳ ಮಾಲೀಕರು ಕಟ್ಟಡ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸುತ್ತಿದ್ದರೂ ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರುಗಳು ಸೂಕ್ತ ಕ್ರಮಕೈಗೊಳ್ಳದೆ ಪ್ರಾವಿಜನಲ್ ಆದೇಶ ನೀಡಿ 4 ತಿಂಗಳಾದರೂ ಯಾವುದೇ ಕ್ರಮಕೈಗೊಂಡಿರುವುದಿಲ್ಲವೆಂದು ಆಪಾದಿಸಿರುವ ದೋಷಾರೋಪಣೆಯಾಗಿರುತ್ತದೆ. ಆಪಾದಿತ ಸರ್ಕಾರಿ ನೌಕರ–1 **ಶ್ರೀ ಚಂದ್ರಶೇಖರ್,** ಸಹಾಯಕ ಅಭಿಯಂತರರು, ಬಾಣಸವಾಡಿ, ವಾರ್ಡ್ ನಂ. 27 ರಲ್ಲಿ 09.09.2015 ರವರೆಗೆ ಮತ್ತು **ಆಪಾದಿತ ಸರ್ಕಾರಿ ನೌಕರ–2 ಶ್ರೀಮತಿ ಗೀತಾ.** ಸಿ. ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿ

ಸೇವಾನಗರ ಉಪ ವಿಭಾಗ, ಬೆಂಗಳೂರು ರವರು ದಿನಾಮಕ **11.07.2014** ರಿಂದ **13.11.2015** ರವರೆಗೆ ಕರ್ತವ್ಯ ನಿರ್ವಹಿಸಿರುತ್ತಾರೆ. ದೂರುದಾರ ಶ್ರೀ ಮಂಜೇಶ್.ಪಿ ಪತ್ರಕರ್ತರಾಗಿದ್ದು ಸದರಿಯವರು ಒಟ್ಟು 12 ಕಟ್ಟಡಗಳ ಬಗ್ಗೆ ದೂರು ನೀಡಿದ್ದು, ಈ ಪೈಕಿ ದೋಷಾರೋಪಣೆಯಲ್ಲಿ ಆರೋಪಿಸಿರುವ ಎರಡು ಕಟ್ಟಡಗಳು ನಕ್ಷೆಗೆ ವ್ಯತಿರಿಕ್ತ ನಿರ್ಮಾಣವಾಗಿರುವುದು ಕಂಡುಬಂದಿರುತ್ತದೆ.

22) ಪಿಡಬ್ಲ್ಯೂ-2 ಶ್ರೀ ಕೆ. ಆನಂದ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿ ಸೇವಾ ನಗರ ಉಪವಿಭಾಗ, ಬಿಬಿಎಂಪಿ, ಬೆಂಗಳೂರು ರವರು ಸ್ಥಳಕ್ಕೆ ಭೇಟಿ ನೀಡಿ ನಿ.ಪಿ-6 ರಂತೆ ವರದಿ ನೀಡಿದ್ದು, (1) **ವಾರ್ಡ್ ನಂ. 27, ಬಾಣಸವಾಡಿ, ಆಸ್ತಿ ಸಂ. 802 3ನೇ ಎ ಅಡ್ಡರಸ್ತೆ, ಕಲ್ಯಾಣನಗರ, ಬೆಂಗಳೂರು ರ ಸ್ವತ್ತಿನ** ಮಾಲೀಕರು ಶ್ರೀಮತಿ ನಿರ್ಮಲಾ ಗೋಯೆಲ್ ಮತ್ತು ಇನ್ನಿಬ್ಬರಾಗಿದ್ದು, ಸದರಿಯವರು ಸಹಾಯಕರ ನಿರ್ದೇಶಕರು, ನಗರ ಯೋಜನೆ, ಪೂರ್ವ, ಬಿಬಿಎಂಪಿ ಬೆಂಗಳೂರು ರವರಿಂದ ನಕ್ಷೆ ಮಂಜೂರಾತಿ ಪಡೆದಿದ್ದು, ವಾರ್ಡ್ ಪರಿವೀಕ್ಷಣೆ ಸಮಯದಲ್ಲಿ ಸದರಿ ಸ್ವತ್ತಿನ ಮಾಲೀಕರು ಅನಧಿಕೃತವಾಗಿ 3, 4 ಮತ್ತು 5 ನೇ ಮಹಡಿಗಳನ್ನು ನಿರ್ಮಿಸಿರುವುದು ಕಂಡುಬರುತ್ತದೆಂದು, ಸದರಿ ಅನಧಿಕೃತವಾಗಿ ಕಟ್ಟಡ ಕಟ್ಟಿದಕ್ಕೆ ಹಿಂದಿನ ಎ.ಇ.ಇ. ರವರು ಕರ್ನಾಟಕ ಮುನಿಸಿಪಲ್ ಕಾಯ್ದೆ 76 ರ ಕಲಂ 32(1), 321(2) ತಾತ್ಕಲಿಕ ಆದೇಶವನ್ನು ದಿನಾಂಕ 09.07.2015 ರಂದು ಜಾರಿ ಮಾಡಿದ್ದು, ಸದರಿ ಮಾಲೀಕರು ಯಾವುದೇ ಪ್ರತಿಕ್ರಿಯೆ ನೀಡದ ಕಾರಣ ಹಿಂದಿನ ಎ.ಇ.ಎ. ರವರು ಸ್ಥಿರೀಕರಣ ಆದೇಶ ಮಾಡಿರುತ್ತಾರೆಂದು ನುಡಿದಿರುತ್ತಾರೆ.

ಪರಿಶೀಲಿಸಲಾಗಿ ಆಸ್ತಿ ಸಂಖ್ಯೆ 802 ಕ್ಕೆ ಸಂಬಂಧಿಸಿದಂತೆ, ಅದರ ಮಾಲೀಕರು ಶ್ರೀಮತಿ ನಿರ್ಮಲಾ ಗೋಯೆಲ್ ಮತ್ತು ಇನ್ನಿಬ್ಬರು ಸಹಾಯಕ ನಿರ್ದೇಶಕರು, ನಗರ ಯೋಜನೆ ಪೂರ್ವ, ಬಿಬಿಎಂಪಿ ರವರಿಂದ ನಕ್ಷೆ ಪಡೆದಿದ್ದು, 3, 4 ಮತ್ತು 5ನೇ ಮಹಡಿಗಳನ್ನು ಪೂರ್ತಿ **ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುವವರೆಗೂ ಬಿಬಿಎಂಪಿ ಯವರು ಯಾವುದೇ ಕ್ರಮವನ್ನು ಕೈಗೊಂಡಿರುವುದು ಕಂಡುಬಂದಿರುವುದಿಲ್ಲ.** ನಂತರ ದಿನಾಂಕ

09.07.2015 ರಂದು 321(1) ಆಪಾದಿತ ಸರ್ಕಾರಿ ನೌಕರ-2 ರವರು ನೀಡಿರುವುದು ಕಂಡು ಬರುತ್ತದೆ, ನಂತರ ಯಾವುದೇ ಸ್ಥಿರೀಕರಣ ಮಾಡಿರುವುದಾಗಿ ನುಡಿದರೂ ಸ್ಥಿರೀಕರಣ 321(3) ಕಂಡು ಬಂದಿರುವುದಿಲ್ಲ. ನಂತರ ಯಾವುದೇ ಕ್ರಮಕೈಗೊಂಡಿರುವ ಬಗ್ಗೆ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಆಪಾದಿತ ಸರ್ಕಾರಿ ನೌಕರರು ನ್ಯಾಯಾಲಯದಲ್ಲಿ ಕೇವಿಯೆಟನ್ನು ದಾಖಲಿಸಲು ಕಾನೂನು ಕೋಶಕ್ಕೆ ಈ ಕಛೇರಿಯಿಂದ ದಿನಾಂಕ 21.07.2015 ರಂದು ವರದಿ ಸಲ್ಲಿಸಿರುವುದಾಗಿ ಹೇಳಿದ್ದು, ಆದರೆ ಕೇವಿಯೆಟನ್ನು ದಾಖಲಿಸಿರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ ಮತ್ತು ಕೇವಿಯಟ್‌ಗೂ ಇದಕ್ಕೂ ಯಾವುದೇ ಸಂಬಂಧವಿರುವುದಿಲ್ಲ. **ನಿ.ಪಿ-4** ರ ಬಿಬಿಎಂಪಿ ಆಯುಕ್ತರ ಕಛೇರಿ ಆದೇಶ ಸಂಖ್ಯೆ ಬಿ12(1)/ಪಿಆರ್/223/10-11 ದಿನಾಂಕ 28.10.2010 ರಂತೆ ಸಹಾಯಕ ಅಭಿಯಂತರರು ಕಟ್ಟಡ ಪರಿಶೀಲನೆ ಮಾಡಿ ವರದಿ ಮಾಡಬೇಕು, ಕಟ್ಟಡವನ್ನು ನಿಂಟ್ ಲೆವೆಲ್‌ನಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಪರಿಶೀಲಿಸಬೇಕು, ಕಟ್ಟಡದ ಮೇಲ್ಛಾವಣಿ ಕಾಮಗಾರಿಯನ್ನು ಮಂಜೂರಾದ ನಕ್ಷೆಯಂತೆ ಕಟ್ಟಡವನ್ನು ಕಾರ್ಯಪಾಲಕ ಅಭಿಯಂತರರವರು ಪರಿಶೀಲಿಸಬೇಕು. ಆದರೆ, ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರು ಪ್ರಶ್ನಿತ ಕಟ್ಟಡವನ್ನು ಪರಿಶೀಲಿಸದೆ ಕಟ್ಟಡ ಮಾಲೀಕರಿಗೆ 3, 4 ಮತ್ತು 5ನೇ ಮಹಡಿಯನ್ನು ಅನಧಿಕೃತ ಕಟ್ಟಡ ಕಟ್ಟುವಾಗ ಯಾವುದೇ ಕ್ರಮವನ್ನು ಕೈಗೊಂಡಿರುವುದಿಲ್ಲ ಹಾಗೂ ಕೆ.ಎಂ.ಸಿ. ಕಾಯ್ದೆ 1976 ರಂತೆ ಕಲಂ 321(1) ಮತ್ತು 321(2) ರ ತಾತ್ಕಲಿಕ ಆದೇಶ ಜಾರಿ ಮಾಡಿ ಮುಂದಿನ ಕ್ರಮಕ್ಕಾಗಿ ಕಾರ್ಯಪಾಲಕ ಅಭಿಯಂತರವರಿಗೆ ಅನಧಿಕೃತ ಭಾಗವನ್ನು ತೆರವು ಮಾಡುವ ಬಗ್ಗೆ ಕಡತವನ್ನು ದಿನಾಂಕ 09.07.2015 ರಿಂದ ಕಳುಹಿಸದೇ ಆಪಾದಿತ ಸರ್ಕಾರಿ ನೌಕರ-1 ಮತ್ತು 2 ರವರುಗಳು ಕ್ರಮವಾಗಿ 09.09.2015 ಮತ್ತು 13.11.2015 ವರ್ಗಾವಾಗುವವರೆಗೂ ಕಡತ ಕಳುಹಿಸದೆ ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ.

23) 2ನೇ ಸ್ವತ್ತಿನ ಸಂಖ್ಯೆ 837, 3ನೇ ಅಡ್ಡ ರಸ್ತೆ, 1ನೇ ಹಂತ, ಹೆಚ್.ಆರ್.ಬಿ.ಆರ್. ಲೇಔಟ್, ಬಾಣಸವಾಡಿ, ಸದರಿ ಸ್ವತ್ತುಗಳ ಮಾಲೀಕರಾದ ಶ್ರೀಮತಿ ಎಸ್.ಎ. ನಾಗಾದೇವಿ, ಏಸ್.ಎ. ರಾಜು, ಕಾಂತರಾಜಮತ್ತು ಎ.ಆರ್. ನಿರ್ಮಲರವರುಗಳು, ಸಹಾಯಕನಿರ್ದೇಶಕರು, ನಗರ ಯೋಜನೆ, ಪೂರ್ವ ಬಿಬಿಎಂಪಿ, ಬೆಂಗಳೂರು ರವರು ಬೇಸ್‌ಮೆಂಟ್, ನೆಲ, 1 ಮತ್ತು 2ನೇ ಮಹಡಿ ಕಟ್ಟಡ ನಿರ್ಮಿಸಲು ನಕ್ಷೆ ಮಂಜೂರಾತಿ ಪಡೆದಿದ್ದು, ಸ್ಟಿಲ್ಟ್ ನೆಲ, ಮೊದಲನೆ ಮತ್ತು ಎರಡನೇ ಮಹಡಿ ಮತ್ತು ವಸತಿ ಮತ್ತು ವಾಣಿಜ್ಯ ಕಟ್ಟಡ ನಿರ್ಮಿಸಿದ್ದು, ಅದು ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿದ್ದರೂ ನಿ.ಪಿ–4 ರಂತೆ **ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರುಗಳು ಯಾವುದೇ ಕ್ರಮವನ್ನು ಕೈಗೊಳ್ಳದೆ ಅನಧಿಕೃತ ಕಟ್ಟಡ ಕಟ್ಟಲು ಅನವು ಮಾಡಿಕೊಟ್ಟಿದ್ದು,** ನಂತರ ಸದರಿ ಮಾಲೀಕರಿಗೆ ಕೆಎಂಸಿ ಕಾಯ್ದೆ 1976 ರ ಕಲಂ 321(1) ಮತ್ತು 321(2) ರಂತೆ ಹಾಗೂ ದಿನಾಂಕ 24.07.23014 ರಂದು ಸ್ಥಿರೀಕರಣ ಆದೇಶವನ್ನು ಜಾರಿ ಮಾಡಿದ್ದು, ಮುಂದಿನ ಕ್ರಮಕ್ಕಾಗಿ ಕಾರ್ಯಪಾಲಕ ಅಭಿಯಂತರವರಿಗೆ ಅನಧಿಕೃತ ಭಾಗವನ್ನು ತೆರವು ಮಾಡುವ ಬಗ್ಗೆ ಕಡತವನ್ನು ಕಳುಹಿಸದೇ ಆಪಾದಿತ ಸರ್ಕಾರಿ ನೌಕರ–1 ಮತ್ತು 2 ರವರುಗಳು ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ ಸಾಬೀತಾಗಿರುತ್ತದೆ. ಸ್ಥಿತೀಕರಣ ಆದೇಶ ಹೊರಡಿಸಿ ಸುಮಾರು ಆ.ಸ.ನೌ–1 ಮತ್ತು 2 ರವರುಗಳು 24.07.2014 ರಿಂದ ವರ್ಗಾವಣೆಯಾಗುವವರೆಗೂ ಅಂದರೆ ಕ್ರಮವಾಗಿ 09.09.2015 ಮತ್ತು 13.11.2015 ರವರೆಗೆ ಯಾವುದೇ ಕ್ರಮ ಜರುಗಿಸದೆ ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ ರುಜುವಾತಾಗಿರುತ್ತದೆ.

ಮೇಲ್ಕಂಡ ಅಂಶಗಳಿಂದ, ವಾರ್ಡ್ ನಂ. 27 ರ ಬಾಣಸವಾಡಿ (1) ಆಸ್ತಿ ನಂ. 802 ಮತ್ತು ಆಸ್ತಿ ನಂ. (2) 837 ಕ್ಕೆ ಸಂಬಂಧಿಸಿದಂತೆ ಕಟ್ಟಡ ಮಾಲೀಕರುಗಳು ಮಂಜೂರಾತಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಿಸಿರುವ ಬಗ್ಗೆ ಆಪಾದಿತ ಸರ್ಕಾರಿ ನೌಕರ–1 ಮತ್ತು 2 ನಿ.ಪಿ–4 ರಂತೆ ಕಟ್ಟಡ ಪರಿಶೀಲನೆ ಮಾಡದೆ ಅನಧಿಕೃತ ಕಟ್ಟಡ ಕಟ್ಟಲು ಕಟ್ಟಡದ ಮಾಲೀಕರಿಗೆ ಅನುವು ಮಾಡಿಕೊಟ್ಟು, ಕರ್ನಾಟಕ ಮುನಿಸಿಪಲ್ ಕಾಯ್ದೆ 76 ರ ಕಲಂ 321(1), 321(2) ಮತ್ತು 321(3) ರಡಿ ನಿ.ಪಿ–**7** ರಿಂದ **13** ರಂತೆ ಮಾಲೀಕರಿಗೆ ಜಾರಿ

ಮಾಡಿದರೂ ಕಟ್ಟಡದ ಅನಧಿಕೃತ ಭಾಗ/ಮಹಡಿಗಳನ್ನು ತೆರವು ಮಾಡುವ ಸಂಬಂಧ ಕಾರ್ಯಪಾಲಕ ಅಭಿಯಂತರರಿಗೆ ಕಡತವನ್ನು ಕಳುಹಿಸದೆ, ನ್ಯಾಯಾಲಯದಲ್ಲಿ ಕೇವಿಯೆಟ್‌ನ್ನು ದಾಖಲಿಸಲು ಕಾನೂನು ಕೋಶಕ್ಕೆ ಕಾನೂನು ಅಭಿಪ್ರಾಯಕ್ಕಾಗಿ ಕಳುಹಿಸಲಾಗಿದೆ ಎಂದು ಹೇಳಿದ್ದು ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ, ಉದ್ದೇಶಪೂರ್ವಕವಾಗಿ ತಾವುಗಳು ವರ್ಗಾವಾಗುವವರೆ ಅಂದರೆ ಕ್ರಮವಾಗಿ 9.9.2015 ಮತ್ತು 13.11.2015 ರವರೆಗೆ ಯಾವುದೇ ಕ್ರಮವನ್ನು ಜರುಗಿಸದೆ ಕಡತವನ್ನು ಕಾರ್ಯಪಾಲಕ ಅಭಿಯಂತರವರಿಗೆ ಅನಧಿಕೃತ ಕಟ್ಟಡಗಳನ್ನು ತೆರವುಗೊಳಿಸುವ ಸಂಬಂಧ ಕಳುಹಿಸದೆ ಆ.ಸ.ನೌ–1 ಮತ್ತು 2 ರವರುಗಳ ಕರ್ತವ್ಯಲೋಪವೆಸಗಿರುವುದು ವಿಚಾರಣೆಯಿಂದ ಶಿಸ್ತುಪ್ರಾಧಿಕಾರಿಗಳು ಸಾಬೀತುಪಡಿಸುವಲ್ಲಿ **ಸಫಲರಾಗಿರುತ್ತಾರೆ.**

ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ ಈ ಕೆಳಕಂಡಂತೆ ವಿಚಾರಣಾ ವರದಿ ಸಲ್ಲಿಸಲಾಗಿದೆ.

**: ವಿಚಾರಣಾ ವರದಿ :**

ಶಿಸ್ತು ಪ್ರಾಧಿಕಾರವು ಆಪಾದಿತ ಸರ್ಕಾರಿ ನೌಕರ–1 **ಶ್ರೀ ಚಂದ್ರಶೇಖರ್,** ಸಹಾಯಕ ಅಭಿಯಂತರರು, ಬಾಣಸವಾಡಿ ವಾರ್ಡ್ ನಂ. 27 ಮತ್ತು **ಆಪಾದಿತ ಸರ್ಕಾರಿ ನೌಕರ–2 ಶ್ರೀಮತಿ ಗೀತಾ ಸಿ,** ಸಹಾಯಕ ಕಾರ್ಯಪಾಲಕ ಅಭಿಯಂತರರು, ಮಾರುತಿ ಸೇವಾನಗರ ಉಪವಿಭಾಗ, ಕಮ್ಮನಹಳ್ಳಿ ಮುಖ್ಯ ರಸ್ತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ, ಬೆಂಗಳೂರು ರವರುಗಳ ವಿರುದ್ಧದ ದೋಷಾರೋಪಣೆಯಲ್ಲಿ ಮಾಡಲಾದ ಆಪಾದನೆಗಳನ್ನು **ರುಜುವಾತು ಪಡಿಸುವಲ್ಲಿ ಸಫಲರಾಗಿರುತ್ತಾರೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ–1 ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

**28ನೇ ಫೆಬ್ರವರಿ 2022.**

**(ಜಿ. ನಂಜುಂಡಯ್ಯ)**
ಅಪರ ನಿಬಂಧಕರು ವಿಚಾರಣೆಗಳು–10,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

| | |
|---|---|
| **LIST OF WITNESS EXAMINED ON BEHALF OF DISCIPLINARY AUTHORITY :** | |
| PW-1 : Sri. Manjesh P., (Complainant) (original) | |
| PW-2 : Sri K. Anand, AEE, Maruti Seva Nagar, BBMP, Bengaluru. | |
| **LIST OF EXHIBITS MARKED ON BEHALF OF DISCIPLINARY AUTHORITY:** | |
| Ex.P.1 : | Complaint of complainant dated:26-05-2015. Original) |
| Ex.P.2 : | Form I (Complaint) dated: 26-05-2015 (Original) |
| Ex.P.3 : | Form No.II (Affidavit) dated: 26-05-2015. (Original) |
| Ex.P.4 : | Copy of the office order dated: 28-10-2010 of Commissioner, BBMP, Bengaluru. (xerox) |
| Ex.P.5 : | Rejoinder of Complaint dated: 13-06-2016 along with enclosure (Xerox) |
| Ex.P.6 | Report of Sri K. Anand, AEE, Maruti Seva Nagar Sub-Division, BBMP, Bengaluru dated: 20-01-2016 (Original) |
| Ex.P. 7 to 13 : | Karnataka Municipal Act 321(1), 321(2) and confirmation order in respect of site No.802 and 837. (Original) |

Date of Retirement of DGO-1 is 30-11-2021 **(Already Retired)**

Date of Retirement of DGO-2 is **30-04-2032.**

**28th February 2022.**

**( G. NANJUNDAIAH )**
Additional Registrar (Enquiries)-10
Karnataka Lokayukta,
Bengaluru.

**GOVERNMENT OF KARNATAKA**

**KARNATAKA LOKAYUKTA**

No.UPLOK-1/DE/101/2018/ARE-10

Multi Storied Building,
Dr. B.R. Ambedkar Veedhi,
Bengaluru-560 001
Date: **03/03/2022**

## RECOMMENDATION

Sub:- Departmental inquiry against;
1) Sri Chandrashekar, Assistant Engineer, Bruhat Bengaluru Mahanagara Palike, Ward No.27, Banaswadi, Bengaluru;
2) Smt. Geetha C., Assistant Executive Engineer, Bruhat Bengaluru Mahanagara Palike, Maruthisevanagar Sub Division, Kammanahalli Main Road, Bengaluru – Reg.

Ref:- 1) Govt. Order No. ನಅಇ **630** ಎಂಎನ್‌ಯು **2017,** Bengaluru dated 5/2/2018.

2) Nomination order No.UPLOK-1/DE/101/2018, Bengaluru dated 26/2/2018 of Upalokayukta-1, State of Karnataka, Bengaluru

3) Inquiry Report dated 28/2/2022 of Additional Registrar of Enquiries-10, Karnataka Lokayukta, Bengaluru

----

The Government by its order dated 5/2/2018 initiated the disciplinary proceedings against (1) Sri Chandrashekar, Assistant Engineer, Bruhat Bengaluru Mahanagara Palike, Ward No.27, Banasawadi, Bengaluru and (2) Smt. Geetha C., Assistant Executive Engineer, Bruhat Bengaluru Mahanagara Palike, Maruthisevanagar Sub Division, Bengaluru (hereinafter referred to as Delinquent Government Officials 1 & 2, for short as DGO-1 and DGO-2 respectively) and entrusted the Departmental Inquiry to this Institution.

2. This Institution by Nomination Order No.UPLOK-1/DE/101/2018 Bengaluru dated 26/2/2018 nominated Additional Registrar

of Enquiries-10 Karnataka Lokayukta, Bengaluru, as the Inquiry Officer to frame charges and to conduct Departmental Inquiry against DGOs 1 & 2 for the alleged charge of misconduct, said to have been committed by them.

3. The sum and substance of the charges against the DGOs 1 and 2 are that in respect of the property bearing No. 802, HRBR Layout, 1st Stage, Banasawadi, Bengaluru, the DGOs have issued Provisional Order to the owner on 9/7/2015 and in respect of property bearing No.837, HRBR Layout, 1st Stage, Banasawadi, the provisional Order was issued on 15/7/2014 and Confirmation Order was issued on 24/7/2014. Though the Respondents have worked till November 2015 at Maruthisevanagar Sub Division, they had not taken further action for a period of 4 months after issuing the Provisional order and confirmation order in July 2014, which act of the DGOs 1 and 2 amounts to dereliction of duty and misconduct.

4. The Inquiry Officer (Additional Registrar of Enquiries-10) on proper appreciation of oral and documentary evidence has held that the Disciplinary Authority has proved the above charges against DGO-1 Sri Chandrashekar, Assistant Engineer, Bruhat Bengaluru Mahanagara Palike, Ward No.27, Banasawadi, Bengaluru and DGO-2 Smt. Geetha C., Assistant Executive Engineer, Bruhat Bengaluru Mahanagara Palike, Maruthisevanagar Sub Division, Bengaluru.

5. On re-consideration of inquiry report and taking note of the totality of the circumstances of the case, I do not find any reason to interfere with the findings recorded by the Inquiry Officer. It is

hereby recommended to the Government to accept the report of Inquiry Officer.

6. As per the First Oral Statement submitted by DGOs 1 & 2;

(1) DGO-1 Sri Chandrashekar has retired from service on 30/11/2021 (during the pendency of inquiry).

(2) DGO-2 Smt. Geetha C is due to retire from service on 30/4/2032.

7. Having regard to the nature of charges proved against DGO-1 Sri Chandrashekar, Assistant Engineer, Bruhat Bengaluru Mahanagara Palike, Ward No.27, Banasawadi, Bengaluru and DGO-2 Smt. Geetha C., Assistant Executive Engineer, Bruhat Bengaluru Mahanagara Palike, Maruthisevanagar Sub Division, Bengaluru, it is hereby recommended to the Government for imposing penalty of;

(1) Withholding 10% of pension payable to DGO-1 Sri Chandrashekar for a period of 5 years;

(2) Withholding two annual increments payable to DGO-2 Smt. Geetha C., with cumulative effect.

8. Action taken in the matter shall be intimated to this Authority.

Connected records are enclosed herewith.

3/3/22

**(JUSTICE B.S.PATIL)**
Upalokayukta,
State of Karnataka,
Bengaluru